# **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

## **ಸಿ.ಸಿ.323–12**

| | | |
|---|---|---|
| ಹೆಸರು | ಶ್ರೀನಿವಾಸ | ಪ್ರಾ.ಸಾ.1 |
| ತಂದೆಯ ಹೆಸರು | ಕೆಂಪಯ್ಯ | ಚಾ.ಸಾ.1 |
| ವಯಸ್ಸು | 62ವರ್ಷ | |
| ಕೆಲಸ | ನಿವೃತ್ತ ಆರ್.ಐ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬ್ಯಾಟರಾಯನಪುರ | ದಿ:–10.08.2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ–**

ನಾನು 2011 ರಿಂದ 2013ನೇ ಸಾಲಿನಲ್ಲಿ ಸೂಲಿಬೆಲೆ ಹೋಬಳಿ ಕಂದಾಯ ಇಲಾಖೆಯಲ್ಲಿ ವೃತ್ತ ನಿರಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

ಆಗ ಮರುಳು ದಂಧೆಯನ್ನು ತಡೆಗಟ್ಟುವಂತೆ ಮೇಲಧೀಕಾರಿಗಳ ಆದೇಶದ ಮೇರೆಗೆ ನಾವು ದಿ: 2.09.2011 ರಂದು ಕಲ್ಕುಂಟೆ ಅಗ್ರಹಾರ ಗ್ರಾಮದ ಸರ್ವೆ ನಂ. 22 ರ ಕರೆ ಅಂಗಳದಲ್ಲಿ ಆರೋಪಿಗಳು ಮರುಳು ಫಿಲ್ಟರ್ ಮಾಡುತ್ತಿದ್ದಾರೆ ಎಂಬ ವಿಚಾರ ತಿಳಿದು ನಾನು ಮತ್ತು ಚಾ.ಸಾ. 2 ರಿಂದ 8 ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಲಾಗಿದ್ದು, ಅಲ್ಲಿ ಆರೋಪಿಗಳು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮರಳನ್ನು ಫಿಲ್ಟರ್ ಮಾಡುತ್ತಿದ್ದರು,ಆಗ ಅವರು ನಮ್ಮ ಜೀಪನ್ನು ನೋಡಿ ಓಡಿ ಹೋಗಿರುತ್ತಾರೆ. ಸ್ಥಳದಲ್ಲಿ 9 ಡೀಸೆಲ್ ಮೋಟರು , ಮೆಸ್ಸು ಇತ್ತು. ಸದರಿ ಮೆಸ್ಸನ್ನು ಜೆ.ಸಿ.ಬಿ ಇಂದ ನಾಶಪಡಿಸಿ ಮಹಜರು ಕ್ರಮ ಜರುಗಿಸಿ ಅಲ್ಲಿದ್ದ ಡೀಸೆಲ್ ಮೋಟರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ಗುರತಿಸಿರುತ್ತೇನೆ. ಮಹಜರನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು 1(ಎ) ಎಂದು ನಿಶಾನಿಸಿಕೊಳ್ಳಯಿತು.

ಆ ನಂತರ ಅನಗೊಂಡನಹಳ್ಳಿ ಪೊ.ಠಾಣೆಗೆ ದೂರು ನೀಡಿರುತ್ತೇನೆ. ಆ ದಿನ ನಾನು ನೀಡಿದ ದೂರನ್ನು ನೋಡಿ ಗುರುತಿಸಿರುತ್ತೇನೆ. ದೂರನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು 2(ಎ) ಎಂದು ನಿಶಾನಿಸಿಕೊಳ್ಳಯಿತು. ಈ ವಿಚಾರವಾಗಿ ನಾನು ತನಿಖಾಧೀಕಾರಿಯ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ನಮ್ಮನ್ನು ದೂರದಿಂದ ನೋಡಿ ಓಡಿ ಹೋಗಿದ್ದ ಕಾರಣ ಆರೋಪಿಗಳನ್ನು ನೋಡಿಲ್ಲ, ಆದರಿಂದ ಆರೋಪಿಗಳನ್ನು ಗುರುತಿಸಲಾಗುವುದಿಲ್ಲ. ಆ ದಿನ ಅಮಾನತ್ತುಪಡಿಸಿಕೊಂಡ ಡೀಸೆಲ್ ಮೋಟರನ್ನು ನೋಡಿದರೆ ಗುರುತಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸಹಾಯಕ ಸರ್ಕಾರಿ ಅಭೀಯೋಜಕರಿಂದ ಸಮಯ ಕೋರಿದ್ದ: ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**